# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

**(ಹಿಂದಿನ ಪದನಾಮ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ)**

ಕುಲಸಚಿವರ ಕಛೇರಿ, ಜ್ಞಾನಶಕ್ತಿ ಆವರಣ, Registrar Office, Torvi
ವಿಜಯಪುರ ☎:08352–229051 www.kswu.ac.in **Fax:** 08352 -229057

ಸಂಖ್ಯೆ:ಮವಿವಿ/ಶೈಕ್ಷಣಿಕ/ಸಿಂಡಿಕೇಟ್–102/2017–18/2558 ದಿನಾಂಕ:1–12–2017

ಗೆ,
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ
ಎಲ್ಲ ಸಿಂಡಿಕೇಟ್ ಸದಸ್ಯರುಗಳಿಗೆ

**ವಿಷಯ:** ದಿನಾಂಕ:– 27–11–2017 ರಂದು ಮುಂಜಾನೆ 11:00 ಗಂಟೆಗೆ ವಿಶ್ವವಿದ್ಯಾನಿಲಯದ "ಜ್ಞಾನಶಕ್ತಿ (ತೊರವಿ) ಆವರಣ, ಆಡಳಿತ ಭವನದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

ಮಾನ್ಯರೆ,

ದಿನಾಂಕ:–27–11–2017 ರಂದು ಮುಂಜಾನೆ 11:00 ಗಂಟೆಗೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ "ಜ್ಞಾನಶಕ್ತಿ (ತೊರವಿ) ಆವರಣದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ಇದರೊಂದಿಗೆ ಕಳುಹಿಸಲಾಗಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

**ಕುಲಸಚಿವರು ಹಾಗೂ ಸದಸ್ಯ**
**ಕಾರ್ಯದರ್ಶಿಗಳು**
**ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ**

**ಅಡಕ: ನಡವಳಿಗಳು 1 ರಿಂದ 13 ಪುಟಗಳು**

**ಪ್ರತಿಗಳು:–**

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560001.
2. ಸರಕಾರದ ಪ್ರದಾನ ಕಾರ್ಯದರ್ಶಿಗಳು , ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು) ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ ಡಾ॥ ಬಿ.ಆರ್.ಅಂಬೇಡ್ಕರ ವೀದಿ, ಬೆಂಗಳೂರು – 560001.
3. ಕಛೇರಿ ಪ್ರತಿ.

# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರದ ಸಿಂಡಿಕೇಟ್ ಸದಸ್ಯರ ಪಟ್ಟಿ

| ಕ್ರ.ಸಂ | ಕರಾವಿ ಅಧಿನಿಯಮ 2000 ಪ್ರಕರಣ 28 | ಸದಸ್ಯರ ಹೆಸರು | ಪದನಾಮ | ಇಂದ | ವರೆಗೆ |
|---|---|---|---|---|---|
| 1. | 1(ಎ) | ಪ್ರೊ.ಸಬಿಹಾ, ಕುಲಪತಿಗಳು | ಸಭಾಧ್ಯಕ್ಷರು | 20-6-2016 | |
| 2. | 1(ಬಿ) | ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 3. | 1(ಸಿ) | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 4. | 1(ಡಿ) | ಪ್ರೊ.ಎನ್.ಚಂದ್ರಪ್ಪ, ಡೀನರು ಶಿಕ್ಷಣ ನಿಕಾಯ. | ಸದಸ್ಯರು | 18-11-2017 | 17-11-2018 |
| 5. | 1(ಇ) | ಶ್ರೀಮತಿ ಅರುಣಾಕುಮಾರಿ.ಎಸ್.ಕೆ | ಸದಸ್ಯರು | 11-04-2017 | 10-04-2020 |
| 6. | 1(ಇ) | ಶ್ರೀಮತಿ ಅನಘಾ ಅಚ್ಯುತ್ ಲಿಮಯೆ | ಸದಸ್ಯರು | 11-04-2017 | 10-04-2020 |
| 7. | 1(ಎಫ್) | ಶ್ರೀ ನಾನಾಗೌಡ ಹಿಪ್ಪರಗಿ | ಸದಸ್ಯರು | 02-12-2016 | 01-12-2017 |
| 8. | 1(ಎಫ್) | ಶ್ರೀಮತಿ ಬುಷಿರಾ ಬೇಗಂ | ಸದಸ್ಯರು | 02-12-2016 | 01-12-2017 |
| 9. | 1(ಎಫ್) | ಡಾ. ಬಿರಾದಾರ ಅರವಿಂದಕುಮಾರ | ಸದಸ್ಯರು | 02-12-2016 | 01-12-2017 |
| 10. | 1(ಎಫ್) | ಡಾ. ಹುಮೆರಾ ಸುಲ್ತಾನ | ಸದಸ್ಯರು | 02-12-2016 | 01-12-2017 |
| 11. | 1(ಜಿ) | ಡಾ.ಸತ್ಯಾನಂದ ಪಾತ್ರೋಟ | ಸದಸ್ಯರು | 19-02-2015 | 18-02-2018 |
| 12. | 1(ಜಿ) | ಶ್ರೀ.ಎಂ.ಎಲ್.ಶಾಂತಗಿರಿ | ಸದಸ್ಯರು | 19-02-2015 | 18-02-2018 |
| 13. | 1(ಜಿ) | ಡಾ.ಫರ್ಜಾನಾ.ಎಂ | ಸದಸ್ಯರು | 19-02-2015 | 18-02-2018 |
| 14. | 1(ಜಿ) | ಡಾ.ಸುಜಾತಾ ಎಸ್ ಜಂಗಮಶೆಟ್ಟಿ | ಸದಸ್ಯರು | 19-02-2015 | 18-02-2018 |
| 15. | 1(ಜಿ) | ಶ್ರೀ.ಆರ್.ಸಿ.ಪಾಟೀಲ | ಸದಸ್ಯರು | 19-02-2015 | 18-02-2018 |
| 16. | 1(ಜಿ) | ಶ್ರೀ.ರವೀಂದ್ರ ಭಾವಿಕಟ್ಟಿ | ಸದಸ್ಯರು | 19-02-2015 | 18-02-2018 |
| 17. | 1(ಹೆಚ್) | ಪ್ರೊ.ಎಸ್.ಬಿ.ಕಾಮಶೆಟ್ಟಿ | ಸದಸ್ಯರು | 5-9-2017 | 4-9-2018 |
| 18. | 1(ಐ) | ನಿರ್ದೇಶಕರು ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 19. | 1(ಜೆ) | ಜಂಟಿ ನಿರ್ದೇಶಕರು, ಧಾರವಾಡ | ಸದಸ್ಯರು | -- | |
| 20. | 1(ಕೆ) | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 21. | | ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು | -- | -- |
| 22. | ಪ್ರಕರಣ 18(2) | ಪ್ರೊ.ಎಸ್.ಬಿ.ಮಾಡಗಿ, ಕುಲಸಚಿವರು(ಮೌ) | ಸದಸ್ಯರು | 4-10-2017 | |
| 23. | ಪ್ರಕರಣ 17(2) | ಪ್ರೊ. ಎಲ್.ಆರ್.ನಾಯಕ, ಕುಲಸಚಿವರು | ಸದಸ್ಯ – ಕಾರ್ಯದರ್ಶಿ | 4-10-2017 | |

# ದಿನಾಂಕ:27–11–2017 ರಂದು ಮುಂಜಾನೆ 11:00ಗಂಟೆಗೆ, ಸಿಂಡಿಕೇಟ್ ಸಭಾಂಗಣ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

## ಸಭೆಗೆ ಹಾಜರಾದ ಸದಸ್ಯರು

| | | |
|---|---|---|
| 1. | ಪ್ರೊ. ಸಬಿಹಾ, ಕುಲಪತಿಗಳು | : ಸಭಾಧ್ಯಕ್ಷರು |
| 2. | ಶ್ರೀ.ಡಿ.ಎಂ.ನಡವಣಿ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ,ಧಾರವಾಡ | : ಸದಸ್ಯರು |
| 3. | ಶ್ರೀಮತಿ ಅರುಣಾಕುಮಾರಿ.ಎಸ್.ಕೆ | : ಸದಸ್ಯರು |
| 4. | ಶ್ರೀಮತಿ ಅನಘಾ ಅಚ್ಯುತ್ ಲಿಮಯೆ | : ಸದಸ್ಯರು |
| 5. | ಶ್ರೀ ನಾನಾಗೌಡ ಹಿಪ್ಪರಗಿ | : ಸದಸ್ಯರು |
| 6. | ಡಾ.ಬಿರಾದಾರ ಅರವಿಂದಕುಮಾರ | : ಸದಸ್ಯರು |
| 7. | ಡಾ.ಹುಮೆರಾ ಸುಲ್ತಾನ | : ಸದಸ್ಯರು |
| 8. | ಶ್ರೀಮತಿ ಬುಷಿರಾ ಬೇಗಂ | : ಸದಸ್ಯರು |
| 9. | ಡಾ.ಸತ್ಯಾನಂದ ಪಾತ್ರೋಟ | : ಸದಸ್ಯರು |
| 10. | ಶ್ರೀ ಮುದುಕಪ್ಪ ಲಕ್ಷ್ಮಪ್ಪ ಶಾಂತಗಿರಿ | : ಸದಸ್ಯರು |
| 11. | ಡಾ.ಫರ್‌ಜಾನಾ ಎಂ | : ಸದಸ್ಯರು |
| 12. | ಡಾ.ಸುಜಾತಾ ಜಂಗಮಶೆಟ್ಟಿ | : ಸದಸ್ಯರು |
| 13. | ಶ್ರೀ ಆರ್.ಬಿ.ಭಾವಿಕಟ್ಟಿ | : ಸದಸ್ಯರು |
| 14. | ಶ್ರೀ ಆರ್.ಸಿ.ಪಾಟೀಲ | : ಸದಸ್ಯರು |
| 15. | ಪ್ರೊ.ಎಸ್.ಬಿ.ಕಾಮಶೆಟ್ಟಿ | : ಸದಸ್ಯರು |
| 16. | ಪ್ರೊ.ಎಸ್.ಬಿ.ಮಾಡಗಿ, ಕುಲಸಚಿವರು (ಮೌಲ್ಯಮಾಪನ) | : ಸದಸ್ಯರು |
| 17. | ಪ್ರೊ.ಎಲ್.ಆರ್.ನಾಯಕ, ಕುಲಸಚಿವರು | : ಸದಸ್ಯ ಕಾರ್ಯದರ್ಶಿ |

## ಸಭೆಗೆ ಗೈರು ಹಾಜರಾದ ಸದಸ್ಯರು

| | | |
|---|---|---|
| 1. | ಪ್ರೊ. ಎನ್.ಚಂದ್ರಪ್ಪ, ಡೀನರು ಶಿಕ್ಷಣ ನಿಕಾಯ | : ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 4. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 5. | ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 6. | ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | : ಸದಸ್ಯರು |

ಮಾನ್ಯ ಕುಲಪತಿಗಳಾದ ಪ್ರೊ.ಸಬಿಹಾ ಅವರು ಎಲ್ಲ ಸದಸ್ಯರನ್ನು ಸ್ವಾಗತಿಸಿ, ಕಾರ್ಯಸೂಚಿಯನ್ನು ಮಂಡಿಸಲು ಕುಲಸಚಿವರಿಗೆ ತಿಳಿಸಿದರು.

**<u>ದಿನಾಂಕ: 27–11–2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

**ದಿನಾಂಕ: 24–10–2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವುದು.**

**ನಿರ್ಣಯ:–**

**ದಿನಾಂಕ:24–10–2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು.**

**ದಿನಾಂಕ: 06–09–2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ.**

**ನಿರ್ಣಯ:–**

**ದಿನಾಂಕ: 6–9–2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಒಪ್ಪಿಕೊಳ್ಳಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ : 01*

ಕರ್ನಾಟಕ ರಾಜ್ಯ ಅಧಿನಿಯಮ 2000 ಪ್ರಕರಣ 69ರನ್ವಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರದ ಒಂಬತ್ತನೇ ಘಟಿಕೋತ್ಸವವನ್ನು ನಡೆಸಲು ಹಾಗೂ ಈ ಕೆಳಕಂಡ ವಿಷಯಗಳ ಕುರಿತು ಚರ್ಚಿಸಿ ಅನುಮೋದಿಸಲು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿದೆ.

1. ವಿಶ್ವವಿದ್ಯಾನಿಲಯದ ಒಂಬತ್ತನೇ ಘಟಿಕೋತ್ಸವದ ದಿನಾಂಕವನ್ನು ನಿಗದಿಪಡಿಸಲು ಮಾನ್ಯ ಕುಲಾಧಿಪತಿಗಳ ಅನುಮೋದನೆ ಕುರಿತು.
2. ಘಟಿಕೋತ್ಸವಕ್ಕೆ ತಗಲುವ ಅಂದಾಜು ರೂ.30,00,000/– ವೆಚ್ಚಕ್ಕೆ ಅನುಮತಿ ನೀಡುವ ಕುರಿತು.
3. ಘಟಿಕೋತ್ಸವದ ಮುಖ್ಯ ಅತಿಥಿಗಳ ಹೆಸರನ್ನು ಸೂಚಿಸುವ ಕುರಿತು.
4. ಗೌರವ ಡಾಕ್ಟರೇಟ್ ಪದವಿ ಆಯ್ಕೆ ಮಾಡುವ ಅಭ್ಯರ್ಥಿಗಳ ಸಂಖ್ಯೆ ಹಾಗೂ ಅವರ ಹೆಸರನ್ನು ಸೂಚಿಸುವ ಕುರಿತು.
5. ಸರಕಾರದ ಪತ್ರ ಸಂಖ್ಯೆ ಇಡಿ398 ಯುಆರ್‌ಸಿ 2014(3) ದಿನಾಂಕ:14–10–2014, ಇದರ ನಿರ್ದೇಶನದ ಮೇರೆಗೆ ಗೌರವ ಡಾಕ್ಟರೇಟ್ ಪದವಿ ಆಯ್ಕೆ ಸಮಿತಿಯನ್ನು ರಚಿಸುವ ಬಗ್ಗೆ.

*ನಿರ್ಣಯ:–*

- **ಘಟಿಕೋತ್ಸವದ ದಿನಾಂಕವನ್ನು ನಿಗದಿಪಡಿಸಲು ಮಾನ್ಯ ಕುಲಾಧಿಪತಿಗಳಿಗೆ ಪತ್ರ ಬರೆಯಲು ಅನುಮೋದಿಸಲಾಯಿತು.**
- **ಘಟಿಕೋತ್ಸವಕ್ಕೆ ತಗಲುವ ಅಂದಾಜು ರೂ.30,00,000/– ವೆಚ್ಚಕ್ಕೆ ಅನುಮತಿಸಲಾಯಿತು.**
- **ಘಟಿಕೋತ್ಸವದ ಮುಖ್ಯ ಅತಿಥಿಗಳ ಪಟ್ಟಿಯನ್ನು *ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.***
- **ಗೌರವ ಡಾಕ್ಟರೇಟ್ ಪದವಿಗೆ ಈ ಕೆಳಕಂಡ ಹೆಸರನ್ನು ಚರ್ಚಿಸಲಾಯಿತು. ಶ್ರೀಮತಿ ರುಥ್ ಮನೋರಮಾ, ಶ್ರೀಮತಿ ಸಾಲುಮರದ ತಿಮ್ಮಕ್ಕ, ಶ್ರೀಮತಿ ನೀಲೆಖಣಿ, ಡಾ.ಪಂಕಜ ಮಿಥಲ್, ಡಾ.ಶಶಿಕಲಾ ಗುರುಪುರ, ಡಾ.ಅನುರಾಧಾ, ಶ್ರೀಮತಿ.ಇಂದಿರಾ ಮಾನ್ವಿಕರ್, ಡಾ.ವಿಜಯಲಕ್ಷ್ಮಿ ಕೊಸಗಿ, ಶ್ರೀಮತಿ.ಕೆ.ರತ್ನ ಪ್ರಭಾ.**
- ***ಸರಕಾರದ ಪತ್ರ ಸಂಖ್ಯೆ ಇಡಿ398 ಯುಆರ್‌ಸಿ 2014(3) ದಿನಾಂಕ:14–10–2014, ಅನ್ವಯ ಗೌರವ ಡಾಕ್ಟರೇಟ್ ಪದವಿ ಆಯ್ಕೆ ಸಮಿತಿಯನ್ನು ರಚಿಸಲು ಮಾನ್ಯ ಕುಲಾಧಿಪತಿಗಳಿಗೆ ಪತ್ರ ಬರೆಯಲು ತೀರ್ಮಾನಿಸಲಾಯಿತು.***

# ಸಿಂಡಿಕೇಟ್ ಐಟಂ ಸಂಖ್ಯೆ : 02

ವಿಷಯ:– ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರ ವೇತನ ಶ್ರೇಣಿಯಲ್ಲಿ AGP ಯನ್ನು ರೂ. 7000/– ರಿಂದ 8000/– ಗಳಿಗೆ ಹೆಚ್ಚಿಸುವ ಕುರಿತು

ಉಲ್ಲೇಖ:–1. ಸ್ಕ್ರೀನಿಂಗ್ ಸಮಿತಿ ಸಭೆಯ ನಡಾವಳಿಗಳ ದಿ: 7–11–2017.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಈ ಕೆಳಕಂಡ ಸಹಾಯಕ ಪ್ರಾಧ್ಯಾಪಕರ ವೇತನ ಶ್ರೇಣಿಯಲ್ಲಿ AGP ಯನ್ನು ರೂ. 7000/– ರಿಂದ 8000/–ಗಳಿಗೆ ಹೆಚ್ಚಿಸುವ ಕುರಿತು ದಿನಾಂಕ: 7–11–2017 ರಂದು ಸ್ಕ್ರೀನಿಂಗ್ ಸಮಿತಿಯು ಸಭೆಯನ್ನು ನಡೆಸಿ ನಡಾವಳಿಯನ್ನು ಸಲ್ಲಿಸಿದ್ದು ಸದರಿ ನಡಾವಳಿಗಳನ್ನು ಸಿಂಡಿಕೇಟ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಈ ಕೆಳಕಂಡ ಇಬ್ಬರು ಸಹಾಯಕ ಪ್ರಾಧ್ಯಾಪಕರ ವೇತನ ಶ್ರೇಣಿಯಲ್ಲಿ AGP ಯನ್ನು ರೂ. 7000/– ರಿಂದ 8000/–ಗಳಿಗೆ ಹೆಚ್ಚಿಸಲು ಅನುಮೋದಿಸಲಾಯಿತು.**

| ಕ್ರ ಸಂ | ಹೆಸರು | ವಿಭಾಗದ ಹೆಸರು | ಸ್ಕ್ರೀನಿಂಗ್ ಸಮಿತಿ ಸಭೆ ನಡೆದ ದಿನಾಂಕ | ಅರ್ಹರಾದ ದಿನಾಂಕ | ಶಿಫಾರಸ್ಸು |
|---|---|---|---|---|---|
| 1 | ಡಾ. ಗವಿಸಿದ್ದಪ್ಪ ಆನಂದಳ್ಳಿ ಸಹಾಯಕ ಪ್ರಾಧ್ಯಾಪಕರು. | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ | 7-11-2017 | 18-07-2016 | ಅನುಮೋದಿಸಲಾಯಿತು. |
| 2 | ಡಾ. ಶಾಂತಾದೇವಿ ಟಿ. ಸಹಾಯಕ ಪ್ರಾಧ್ಯಾಪಕರು. | | | 29-01-2015 | ಅನುಮೋದಿಸಲಾಯಿತು. |

# ಸಿಂಡಿಕೇಟ್ ಐಟಂ ಸಂಖ್ಯೆ : 03

ವಿಷಯ:– ವೇತನ ಹೆಚ್ಚಿಸುವ ಕುರಿತು

ಉಲ್ಲೇಖ:–1. ಕುಮಾರಿ ಭಾರತಿ ಹಿರೇಮಠ ಆಪ್ತ ಸಮಾಲೋಚಕಿ ಇವರ ಮನವಿ ಪತ್ರ ದಿನಾಂಕ: 30–6–2017.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕುಮಾರಿ ಭಾರತಿ ಹಿರೇಮಠ ಆಪ್ತ ಸಮಾಲೋಚಕಿ ಇವರ ಪ್ರಸ್ತುತ ವೇತನ ರೂ.17,000/– ಇದ್ದು ಮನೋವಿಜ್ಞಾನ ವಿಷಯದಲ್ಲಿ ರಾಜ್ಯ ಉಪನ್ಯಾಸಕರ ಅರ್ಹತಾ ಪರೀಕ್ಷೆಯನ್ನು (SLET) ಉತ್ತೀರ್ಣಳಾಗಿದ್ದೇನೆ ಆದ್ದರಿಂದ ಆದೇಶ ಸಂಖ್ಯೆ: ಕರಾಮವಿವಿ/ಆಡಳಿತ–1/ಸಿಬ್ಬಂದಿ/2016–17/3186 ದಿನಾಂ:15–3–2017ರ ಪ್ರಕಾರ ಅತಿಥಿ ಉಪನ್ಯಾಸಕರ ಪರಿಷ್ಕೃತ ವೇತನವನ್ನು ಅವರಿಗೂ ಸಹ ನೀಡಬೇಕೆಂದು ವಿನಂತಿಸಿದ್ದಾರೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಸೂಕ್ತ ನಿರ್ದೇಶನಕ್ಕಾಗಿ ಮಂಡಿಸಿದೆ.

***ನಿರ್ಣಯ:– ಕುಮಾರಿ ಭಾರತಿ ಹಿರೇಮಠ ಆಪ್ತ ಸಮಾಲೋಚಕಿ ಇವರ ವೇತನ ದಿನಾಂಕ: 01–12–2017 ರಿಂದ ಅನ್ವಯಿಸುವಂತೆ ಹೆಚ್ಚಿಸಲು ಅನುಮೋದಿಸಲಾಯಿತು.***

# ಸಿಂಡಿಕೇಟ್ ಐಟಂ ಸಂಖ್ಯೆ : 04

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಇಡಿ 87 ಎಂವಿವಿ 2017, ದಿನಾಂಕ:16-01-2017ರನ್ವಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ 02 ವರ್ಷದ ಎಂ.ಇಡಿ ಕೋರ್ಸಿನ ವಿನಿಯಮಾವಳಿಗಳನ್ನು ದಿನಾಂಕ:08-12-2016ರಂದು ಸಲ್ಲಿಸಲಾಗಿತ್ತು. ಅದರ ವಿನಿಯಮಾವಳಿಗಳಲ್ಲಿ ನ್ಯೂನತೆಗಳು ಕಂಡುಬಂದಿದ್ದು, ಅವುಗಳನ್ನು ಸರಿಪಡಿಸಿ ಎಂ.ಇಡಿ ಕೋರ್ಸಿನ ವಿನಿಯಮಗಳು ಎನ್.ಸಿ.ಟಿ.ಇ ಮಾರ್ಗಸೂಚಿಗಳಿಗೆ ಅನುಗುಣವಾಗಿ ರಚಿಸಲಾಗಿದೆಯೆಂಬ ಅಂಶವನ್ನು ಕರಡು ವಿನಿಯಮಗಳಲ್ಲಿ ಖಚಿತಪಡಿಸಿ, ಮರುಸಲ್ಲಿಸುವಂತೆ ಸೂಚಿಸಿರುತ್ತಾರೆ.

1. ಕರಡು ವಿನಿಯಮಾವಳಿಗಳು ಎಂದಿನಿಂದ ಜಾರಿಗೆ ಬರುತ್ತವೆ ಎಂಬ ಬಗ್ಗೆ ಮಾಹಿತಿ.
2. 75% ಹಾಜರಾತಿ ನಿಗದಿಪಡಿಸಿದ್ದು, ಇದರಲ್ಲಿ 10% ಹಾಜರಾತಿಯನ್ನು ನಿಗದಿತ ಶುಲ್ಕ ಪಾವತಿಸಿ, ಹೆರಿಗೆ ಪ್ರಕರಣದಲ್ಲಿ ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದಲ್ಲಿ ಹೆಚ್ಚುವರಿ 5% ಹಾಜರಾತಿಯಿಂದ ವಿನಾಯಿತಿ ನೀಡಲು ಹಾಗೂ ಕ್ರೀಡೆ, ಸಾಂಸ್ಕೃತಿಕ, ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಸಂಬಂಧಪಟ್ಟ ಪ್ರಾಧಿಕಾರದಿಂದ ಮತ್ತು ಕಾಲೇಜಿನ ಪ್ರಾಂಶುಪಾಲರ ಶಿಫಾರಸ್ಸಿನ ಮೇರೆಗೆ ಹಾಜರಾತಿ ನೀಡಲು ಅವಕಾಶ ಕಲ್ಪಿಸಿದೆ. ಆದರೆ ಇಂತಹ ವಿನಾಯಿತಿಗಳು ಎನ್.ಸಿ.ಟಿ.ಇ. ನಿಯಮಾವಳಿಗಳಲ್ಲಿ ಕಂಡುಬರುವುದಿಲ್ಲವಾದ್ದರಿಂದ ಈ ಕುರಿತು ಎನ್.ಸಿ.ಟಿ.ಇ. ನಿಯಮಾವಳಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಅದರಂತೆ ಹಾಜರಾತಿಯನ್ನು ನಿಗದಿಗೊಳಿಸುವುದು.
3. ಎಂ.ಇಡಿ ಕೋರ್ಸ್‌ನ್ನು ಪೂರ್ಣಗೊಳಿಸಲು ಗರಿಷ್ಠ ಅವಧಿಯನ್ನು ನಿಗದಿಪಡಿಸಿರುವುದಿಲ್ಲ. ಆದ್ದರಿಂದ ಎನ್.ಸಿ.ಟಿ.ಇ. ನಿಯಮಾವಳಿಗಳನ್ವಯ ನಿಗದಿಪಡಿಸುವುದು.
4. ಪ್ರಸ್ತುತ ಚಾಲ್ತಿಯಲ್ಲಿರುವ 01 ವರ್ಷದ ಎಂಇಡಿ ಕೋರ್ಸಿನ ವಿನಿಯಮಗಳನ್ನು ನಿರಸನಗೊಳಿಸುವ ಬಗ್ಗೆ ಸೂಕ್ತ ಉಪಬಂಧ ಕಲ್ಪಿಸುವುದು

ಸರ್ಕಾರದ ಸೂಚನೆಯ ಮೇರೆಗೆ ಸೂಕ್ತ ಮಾರ್ಪಾಟುಗಳನ್ನು ಮಾಡಿ, ಕರಡು ವಿನಿಯಮಗಳನ್ನು ದಿನಾಂಕ:18-11-2017ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಅನುಮೋದಿಸಲಾಗಿದ್ದು ಈಗ ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:- ಅನುಮೋದಿಸಲಾಯಿತು.***

# ಸಿಂಡಿಕೇಟ್ ಐಟಂ ಸಂಖ್ಯೆ : 05

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ 02 ವರ್ಷದ ಬಿ.ಇಡಿ ಕೋರ್ಸಿನ ಕರಡು ವಿನಿಯಮಗಳನ್ನು ಅನುಮೋದನೆಗಾಗಿ ದಿನಾಂಕ:16-04-2017ರಂದು ಸಲ್ಲಿಸಲಾಗಿತ್ತು. ಸರ್ಕಾರದ ಪತ್ರ ಸಂಖ್ಯೆ:ಇಡಿ 80 ಎಂವಿವಿ 2016, ದಿನಾಂಕ:17-05-2017ರನ್ವಯ ಸರ್ಕಾರವು ಈ ವಿನಿಯಮಗಳನ್ನು ಪರಿಶೀಲಿಸಿದ್ದು, ವಿಶ್ವವಿದ್ಯಾಲಯದ Uniform Regulations 2000ದ 9.2ರ ಪ್ರಕಾರ 1% ಕಡಿಮೆಬಿದ್ದ ಹಾಜರಾತಿಯನ್ನು ಕುಲಪತಿಗಳು ನಿರ್ಧಿಷ್ಟ ಶುಲ್ಕ ಪಾವತಿ ಮಾಡಿಕೊಂಡು ವಿನಾಯಿತಿ ನೀಡಲು ಅವಕಾಶವಿದ್ದು, ಅದರಂತೆ ಅವಕಾಶವನ್ನು ಕಲ್ಪಿಸಲಾಗಿತ್ತು. ಆದರೆ ಇಂತಹ ಅವಕಾಶವು ಎನ್.ಸಿ.ಟಿ.ಇ. ನಿಯಮಾವಳಿಗಳಲ್ಲಿ ಕಂಡುಬರುವುದಿಲ್ಲವಾದ್ದರಿಂದ, ಎನ್.ಸಿ.ಟಿ.ಇ. ನಿಯಮಾವಳಿಗಳಲ್ಲಿ ತಿಳಿಸಿರುವಂತೆ ಹಾಜರಾತಿಯನ್ನು ನಿಗದಿಪಡಿಸಬೇಕಾಗುತ್ತದೆ ಹಾಗೂ ಎನ್.ಸಿ.ಟಿ.ಇ. ನಿಯಮಾವಳಿಗಳಲ್ಲಿ ಬಿ.ಇಡಿ ಕೋರ್ಸ್‌ನ್ನು ಪೂರ್ಣಗೊಳಿಸಲು ಗರಿಷ್ಠ ಅವಧಿಯನ್ನು 03 ವರ್ಷ ನಿಗದಿಗೊಳಿಸಲಾಗಿರುತ್ತದೆ. ಆದ್ದರಿಂದ ಈ ಅಂಶಗಳ ಬಗ್ಗೆ ಕರಡು ವಿನಿಯಮಗಳನ್ನು ಸರ್ಕಾರಕ್ಕೆ ಅನುಮೋದನೆಗಾಗಿ ಮರುಸಲ್ಲಿಸುವಂತೆ ಸೂಚಿಸಿರುತ್ತಾರೆ.

ಸರ್ಕಾರದ ಸೂಚನೆಯ ಮೇರೆಗೆ ಸೂಕ್ತ ಮಾರ್ಪಾಟುಗಳನ್ನು ಮಾಡಿ, ಕರಡು ವಿನಿಯಮಗಳನ್ನು ದಿನಾಂಕ:18-11-2017ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಅನುಮೋದಿಸಲಾಗಿದ್ದು ಈಗ ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:- ಅನುಮೋದಿಸಲಾಯಿತು.***

## ಸಿಂಡಿಕೇಟ್ ಐಟಂ ಸಂಖ್ಯೆ : 06

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ 02 ವರ್ಷದ ಎಂ.ಪಿ.ಇಡಿ ಕೋರ್ಸಿನ ಕರಡು ವಿನಿಯಮಗಳನ್ನು ಅನುಮೋದನೆಗಾಗಿ ದಿನಾಂಕ:16-04-2017ರಂದು ಸಲ್ಲಿಸಲಾಗಿತ್ತು. ಸರ್ಕಾರದ ಪತ್ರ ಸಂಖ್ಯೆ:ಇಡಿ 81 ಎಂವಿವಿ 2016, ದಿನಾಂಕ:17-05-2017ರನ್ವಯ ಸರ್ಕಾರವು ಈ ವಿನಿಯಮಗಳನ್ನು ಪರಿಶೀಲಿಸಿದ್ದು, ವಿಶ್ವವಿದ್ಯಾಲಯದ Uniform Regulations 2000ದ ಪ್ರಕಾರ ಎಲ್ಲ ಸ್ನಾತಕ/ಸ್ನಾತಕೋತ್ತರ ಪದವಿಗಳಿಗೆ ಪ್ರವೇಶ ಪಡೆದ ದಿನಾಂಕದಿಂದ 04 ವರ್ಷಗಳ ಅವಧಿಯನ್ನು ನೀಡಿರುವ ಕಾರಣ ಅದರಂತೆ ಎಂ.ಪಿ.ಇಡಿ ಕೋರ್ಸ್‌ನ್ನು ಪೂರ್ಣಗೊಳಿಸಲು 04 ವರ್ಷಗಳ ಗರಿಷ್ಠ ಅವಧಿಯನ್ನು ನಿಗದಿಗೊಳಿಸಲಾಗಿತ್ತು. ಆದರೆ ಎನ್.ಸಿ.ಟಿ.ಇ. ನಿಯಮಾವಳಿಗಳಲ್ಲಿ 03 ವರ್ಷಗಳ ಗರಿಷ್ಠ ಅವಧಿಯನ್ನು ನಿಗದಿಗೊಳಿಸಿದ್ದು, ಅದರಂತೆ ವಿನಿಯಮಗಳಲ್ಲಿ ಸೂಕ್ತ ಮಾರ್ಪಾಟು ಮಾಡಿ, ಶೈಕ್ಷಣಿಕ ಪರಿಷತ್ತಿನ ಅನುಮೋದನೆಯೊಂದಿಗೆ ಕರಡು ವಿನಿಯಮಗಳನ್ನು ಸರ್ಕಾರಕ್ಕೆ ಅನುಮೋದನೆಗಾಗಿ ಮರುಸಲ್ಲಿಸುವಂತೆ ಸೂಚಿಸಿರುತ್ತಾರೆ.

ಸರ್ಕಾರದ ಸೂಚನೆಯ ಮೇರೆಗೆ ಸೂಕ್ತ ಮಾರ್ಪಾಟುಗಳನ್ನು ಮಾಡಿ, ಕರಡು ವಿನಿಯಮಗಳನ್ನು ದಿನಾಂಕ:18-11-2017ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಅನುಮೋದಿಸಲಾಗಿದ್ದು ಈಗ ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:- ಅನುಮೋದಿಸಲಾಯಿತು.*

## ಸಿಂಡಿಕೇಟ್ ಐಟಂ ಸಂಖ್ಯೆ : 07

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ 02 ವರ್ಷದ ಬಿ.ಪಿ.ಇಡಿ ಕೋರ್ಸಿನ ಕರಡು ವಿನಿಯಮಗಳನ್ನು ಅನುಮೋದನೆಗಾಗಿ ದಿನಾಂಕ:16-04-2017ರಂದು ಸಲ್ಲಿಸಲಾಗಿತ್ತು. ಸರ್ಕಾರದ ಪತ್ರ ಸಂಖ್ಯೆ:ಇಡಿ 82 ಎಂವಿವಿ 2016, ದಿನಾಂಕ:17-05-2017ರನ್ವಯ ಸರ್ಕಾರವು ಈ ವಿನಿಯಮಗಳನ್ನು ಪರಿಶೀಲಿಸಿದ್ದು, ವಿಶ್ವವಿದ್ಯಾಲಯದ Uniform Regulations 2000ದ ಪ್ರಕಾರ ಎಲ್ಲ ಸ್ನಾತಕ/ಸ್ನಾತಕೋತ್ತರ ಪದವಿಗಳಿಗೆ ಪ್ರವೇಶ ಪಡೆದ ದಿನಾಂಕದಿಂದ 04 ವರ್ಷಗಳ ಅವಧಿಯನ್ನು ನೀಡಿರುವ ಕಾರಣ ಅದರಂತೆ ಬಿ.ಪಿ.ಇಡಿ ಕೋರ್ಸ್‌ನ್ನು ಪೂರ್ಣಗೊಳಿಸಲು 04 ವರ್ಷಗಳ ಗರಿಷ್ಠ ಅವಧಿಯನ್ನು ನಿಗದಿಗೊಳಿಸಲಾಗಿತ್ತು. ಆದರೆ ಎನ್.ಸಿ.ಟಿ.ಇ. ನಿಯಮಾವಳಿಗಳಲ್ಲಿ 03 ವರ್ಷಗಳ ಗರಿಷ್ಠ ಅವಧಿಯನ್ನು ನಿಗದಿಗೊಳಿಸಿದ್ದು, ಅದರಂತೆ ವಿನಿಯಮಗಳಲ್ಲಿ ಸೂಕ್ತ ಮಾರ್ಪಾಟು ಮಾಡಿ, ಶೈಕ್ಷಣಿಕ ಪರಿಷತ್ತಿನ ಅನುಮೋದನೆಯೊಂದಿಗೆ ಕರಡು ವಿನಿಯಮಗಳನ್ನು ಸರ್ಕಾರಕ್ಕೆ ಅನುಮೋದನೆಗಾಗಿ ಮರುಸಲ್ಲಿಸುವಂತೆ ಸೂಚಿಸಿರುತ್ತಾರೆ.

ಸರ್ಕಾರದ ಸೂಚನೆಯ ಮೇರೆಗೆ ಸೂಕ್ತ ಮಾರ್ಪಾಟುಗಳನ್ನು ಮಾಡಿ, ಕರಡು ವಿನಿಯಮಗಳನ್ನು ದಿನಾಂಕ:18-11-2017ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಅನುಮೋದಿಸಲಾಗಿದ್ದು ಈಗ ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:- ಅನುಮೋದಿಸಲಾಯಿತು.*

## ಸಿಂಡಿಕೇಟ್ ಐಟಂ ಸಂಖ್ಯೆ : 08

**ವಿಷಯ:** Uniform Regulations Governing Admission to Post-Graduate Degree/P.G. Diploma/ Certificate programs under Choice Based Credit System (CBCS) and Continuous Assessment Grading Pattern (CAGP) ಕುರಿತು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರು ಉದ್ದೇಶಿಸಿರುವ ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಪ್ರವೇಶ, ವಲಸೆ ಇತ್ಯಾದಿ ವಿಷಯಗಳ ಕುರಿತು ಏಕರೂಪದ ಕರಡು ಪರಿನಿಯಮಾವಳಿ/ವಿನಿಯಮಗಳನ್ನು ರಚಿಸಲು ಸೂಚಿಸಿದ್ದು, ಅದರನ್ವಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯವು ಈ ವಿನಿಯಮಗಳನ್ನು ರಚಿಸಿ, ಸರ್ಕಾರದ ಅನುಮೋದನೆಗಾಗಿ ದಿನಾಂಕ:08-12-2016ರಂದು ಸಲ್ಲಿಸಲಾಗಿತ್ತು. ಸರ್ಕಾರದ ಪತ್ರ ಸಂಖ್ಯೆ:ಇಡಿ 85 ಎಂವಿವಿ 2016, ದಿನಾಂಕ:03-01-2017, 26-04-2017, 19-06-2017 & 24-07-2017ರನ್ವಯ ಕೆಲವೊಂದು ಸಲಹೆಗಳನ್ನು ಸೂಚಿಸಿ ಪುನರ್ ಪರಿಶೀಲಿಸಿ ಸಲ್ಲಿಸಲು ಸೂಚಿಸಲಾಗಿತ್ತು. ಅದರನ್ವಯ ಈ ವಿನಿಯಮಗಳನ್ನು ದಿನಾಂಕ:03-11-2017ರಂದು ಜರುಗಿದ ಡೀನರ ಸಮಿತಿ ಸಭೆಯಲ್ಲಿ ಮಂಡಿಸಿ ಸೂಕ್ತ ಮಾರ್ಪಾಟುಗಳನ್ನು ಮಾಡಲಾಯಿತು.

ಡೀನರ ಸಮಿತಿ ಸಭೆಯ ನಡಾವಳಿಗಳನ್ನು ಹಾಗೂ Uniform Regulations Governing Admission to Post-Graduate Degree/P.G. Diploma/ Certificate programs under Choice Based Credit System (CBCS) and Continuous Assessment Grading Pattern (CAGP) ಅನ್ನು ದಿನಾಂಕ:18-11-2017ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಅನುಮೋದಿಸಲಾಗಿದ್ದು ಈಗ ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:- ಅನುಮೋದಿಸಲಾಯಿತು.*

## *ಸಿಂಡಿಕೇಟ್ ಐಟಂ ಸಂಖ್ಯೆ : 09*

Sub: Approval of Draft Statute Governing Cadre and Recruitment Rules of Employees (Non- Teaching) of Akkamahadevi Women's University, Vijayapura.

Ref: 1) Section 40 & 41 of KSU Act 2000.

The Government of Karnataka, Dept. of Higher Education, had sanctioned various Non-Teaching Posts vide its letter **No. ED 10 UNE 2004, dated: 10.05.2004 and No. ED 44 UNE 2004 dated: 25.05.2004** at the time of inception of this University.

It was felt necessary to frame Draft Statute Governing Cadre and Recruitment Rules of Employees (Non- Teaching) of Akkamahadevi Women's University, Vijayapura, so as to take up for Direct Recruitment of the posts for smooth administration of the University.

Accordingly, the Registrar, Akkamahadevi Women's University, Vijayapura had submitted Draft Statute Governing Cadre and Recruitment Rules of Employees (Non-Teaching) of Akkamahadevi Women's University, Vijayapura during the year 2005 to the Govt. of Karnataka for seeking assent of the Chancellor. In turn, the Government has returned to revise/ remodel the Draft Statute and resubmit to the Govt. after going through the C&R framed by the other Universities in the State vide their letter of June 2005 and letter **No. ED 44 UNE 2004, dated: 08.02.2005** with certain suggestions as stated therein.

At present, the Government of Karnataka in its **Circular No. ED 136 UNE 2017, dated: 17.07.2017** has directed all the Universities to frame Cadre and Recruitment Rules of its own and submit to the Government for approval before making any Direct Re-

cruitment to the Non –Teaching posts after following the Guidelines enshrined therein. If the University is going to recruit for the Non-Teaching posts, the approximate expenditure in terms of salary would be Rs. 5,50,63,728/-.

Now, the existing Draft Statute has been revised as per the suggestions of the Government Department of Higher Education and it is being re-submitted to the Government for seeking approval of the concerned which is herewith enclosed for perusal. Approval of the Finance Committee has been obtained in the meeting of Finance Committee held on 09-11-2017. The same is placed before Academic Council in its meeting held on 18-11-2017.

Hence, the Draft Statute is placed before the Syndicate for its consideration and approval.

**Decision:- Statute Governing Cadre and Recruitment Rules of Employees (Non- Teaching) of Akkamahadevi Women's University, Vijayapura is Approved.**

## *ಸಿಂಡಿಕೇಟ್ ಐಟಂ ಸಂಖ್ಯೆ : 10*

**ವಿಷಯ:** ದಿನಾಂಕ:9–11–2017ರಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಸಭಾ ಭವನ ಬೆಂಗಳೂರಿದಲ್ಲಿ ಜರುಗಿದ ವಿಶೇಷ ಹಣಕಾಸು ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:–* ದಿನಾಂಕ:9–11–2017ರಂದು ಜರುಗಿದ ವಿಶೇಷ ಹಣಕಾಸು ಸಮಿತಿ ಸಭೆಯ ನಡವಳಿಗಳನ್ನು *ಅನುಮೋದಿಸಲಾಯಿತು.***

## *ಸಿಂಡಿಕೇಟ್ ಐಟಂ ಸಂಖ್ಯೆ : 11*

ವಿಷಯ: ನವೆಂಬರ/ಡಿಸೆಂಬರ 2017 ನೇ ಸಾಲಿನ ಪರೀಕ್ಷೆಗಳಿಗಾಗಿ ಉತ್ತರ ಪತ್ರಿಕೆ ಮುದ್ರಿಸಲು ಟೆಂಡರ ಕರೆದ ಕುರಿತು.

ಉಲ್ಲೇಖ:1. ಅಲ್ಪಾವಧಿ ಟೆಂಡರ ಅಧಿಸೂಚನೆ ಸಂಖ್ಯೆ:KSWUB/Exam/Answer Booklet/2017-18/4092 ದಿನಾಂಕ:04–10–2017.

2. ಟೆಕ್ನಿಕಲ್ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್ ದಿನಾಂಕ:04–11–2017.
3. ಕಛೇರಿ ಪತ್ರ ದಿನಾಂಕ:AMWU/Exam/Answer Booklet/2017-18/4849 ದಿ:14–11–2017.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ನವೆಂಬರ/ಡಿಸೆಂಬರ 2017ನೇ ಸಾಲಿನ ಪರೀಕ್ಷೆಗೆ ಹಾಗೂ ಮುಂದಿನ ವರ್ಷ ಪರೀಕ್ಷೆಗಳಿಗಾಗಿ ತುರ್ತಾಗಿ ಆರು ಲಕ್ಷ ಉತ್ತರ ಪತ್ರಿಕೆಗಳು ಬೇಕಾಗಿರುತ್ತವೆ. ಆದ್ದರಿಂದ ನಿಯಮಾನುಸಾರ E-procurement ಮುಖಾಂತರ ಉಲ್ಲೇಖಿತ(1)ರ ಅಲ್ಪಾವಧಿ ಟೆಂಡರ ಅಧಿಸೂಚನೆ ಹೊರಡಿಸಲಾಗಿತ್ತು. ಇದಕ್ಕೆ ಎರಡು ಬಿಡ್ಡರ 1) Nava Kumar R (Hitech Print System Limited) ಮತ್ತು 2) Phani Krishna Ramisetti (V.S Hitech Security Forms Private Limited) ಇವರು ಟೆಕ್ನಿಕಲ್ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್‌ಕ್ಕೆ ಅರ್ಹತೆ ಹೊಂದಿರುತ್ತಾರೆ. ಫೈನಾನ್ಸಿಯಲ್ ಬಿಡ್‌ನಲ್ಲಿ ಎರಡು ಬಿಡ್ಡರಗಳ ದರಪಟ್ಟಿ ಈ ಕೆಳಗಿನಂತಿದೆ.

| ಕ್ರ.ಸಂ | ಬಿಡ್ಡರ ಹೆಸರು | ದರ (ಒಂದು ಉತ್ತರ ಪತ್ರಿಕೆಗೆ) |
|---|---|---|
| 1 | Nava Kumar R (Hitech Print System Limited) | ರೂ. 8.91 |
| 2 | Phani Krishna Ramisetti (V.S Hitech Security Forms Private Limited) | ರೂ. 10.5 |

ಈ ಮೇಲ್ಕಂಡ ಬಿಡ್ಡರಗಳಲ್ಲಿ Nava Kumar R (Hitech Print System Limited) ಇವರ ದರ ಪಟ್ಟಿ ಕಡಿಮೆ ಇರುತ್ತದೆ. ಆದ್ದರಿಂದ ಉತ್ತರ ಪತ್ರಿಕೆಗಳನ್ನು ಪೂರೈಸಲು Nava Kumar R (Hitech Print System Limited) ಇವರಿಗೆ ಉಲ್ಲೇಖಿತ(3)ರ ಪತ್ರವನ್ನು ಬರೆಯಲಾಗಿದೆ. ಈ ವಿಷಯವನ್ನು ಸಿಂಡಿಕೇಟ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:– ಉತ್ತರ ಪತ್ರಿಕೆಗಳನ್ನು ಪೂರೈಸಲು Nava Kumar R (Hitech Print System Limited) ಇವರಿಗೆ ಆದೇಶ ನೀಡಲು ಅನುಮೋದಿಸಲಾಯಿತು.***

## *ಸಿಂಡಿಕೇಟ್ ಐಟಂ ಸಂಖ್ಯೆ : 12*

ವಿಷಯ:– ಸಿಂಧನೂರ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜನ್ನು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಅಧೀನಕ್ಕೆ ಒಳಪಡಿಸುವ ಕುರಿತು.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ದಿನಾಂಕ:9–9–2017ರಂದು ಮಾನ್ಯ ಶಾಸಕರು ಹಾಗೂ ಅಧ್ಯಕ್ಷರು ಕಾಲೇಜು ಅಭಿವೃದ್ಧಿ ಸಮಿತಿ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಸಿಂಧನೂರು ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜ ಅನ್ನು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಒಳಪಡಿಸಲು ಮಾನ್ಯ ಶಾಸಕರು ಸೂಚಿಸಿರುತ್ತಾರೆ. ಮಾನ್ಯ ಶಾಸಕರು ಸೂಚನೆ ಮೇರೆಗೆ ತೆಗೆದುಕೊಂಡ ನಿರ್ಣಯ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:– ಸಿಂಧನೂರ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜನ್ನು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಅಧೀನಕ್ಕೆ ಒಳಪಡಿಸುವ ಪ್ರಸ್ತಾವನೆಯನ್ನು ಸರಕಾರಕ್ಕೆ ಸಲ್ಲಿಸಲು ಅನುಮೋದಿಸಲಾಯಿತು.***

## *ಸಿಂಡಿಕೇಟ್ ಐಟಂ ಸಂಖ್ಯೆ : 14*

**ವಿಷಯ:–** ಡಾ.ಎನ್.ಎಲ್.ಮಲ್ಲಿಕಾರ್ಜುನ, ಪ್ರಾಧ್ಯಾಪಕರು ಎಂಬಿಎ ಅಧ್ಯಯನ ವಿಭಾಗ ಇವರನ್ನು ಅನ್ಯ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ/ನಿಯೋಜನೆ ಮಾಡುವ ಬಗ್ಗೆ.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಡಾ.ಎನ್.ಎಲ್.ಮಲ್ಲಿಕಾರ್ಜುನ, ಪ್ರಾಧ್ಯಾಪಕರು ಎಂಬಿಎ ಅಧ್ಯಯನ ವಿಭಾಗ ಇವರು ತಮ್ಮನ್ನು ಅನ್ಯ (Jnanabharati, Central College Campus or Kolar Campus) ಬೆಂಗಳೂರು ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಮೂಲಕ ಕಳುಹಿಸಲು ವಿನಂತಿಸಿ ದಿನಾಂಕ:20–9–2017ರಂದು ಪತ್ರ ಸಲ್ಲಿಸಿರುತ್ತಾರೆ. ಹಾಗೂ ದಿನಾಂಕ:28–10–2017 ರಂದು ನಿಯೋಜನೆ ಮೇರೆಗೆ ಅನ್ಯ ವಿಶ್ವವಿದ್ಯಾಲಯಕ್ಕೆ ಕಳುಹಿಸಲು ವಿನಂತಿಸಿರುತ್ತಾರೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಮುಂದಿನ ಸೂಕ್ತ ನಿರ್ದೇಶಕ್ಕಾಗಿ ಮಂಡಿಸಿದೆ.(ಪತ್ರದ ಪ್ರತಿಗಳು ಲಗತ್ತಿಸಿದೆ)

**ನಿರ್ಣಯ:– ಡಾ.ಎನ್.ಎಲ್.ಮಲ್ಲಿಕಾರ್ಜುನ, ಪ್ರಾಧ್ಯಾಪಕರು ಎಂಬಿಎ ಅಧ್ಯಯನ ವಿಭಾಗ ಇವರಿಗೆ ಅನ್ಯ ವಿಶ್ವವಿದ್ಯಾನಿಲಯಕ್ಕೆ ಹುದ್ದೆ ರಹಿತ ವರ್ಗಾವಣೆ ನೀಡಲು ಅನುಮತಿಸಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ : 15*

**ವಿಷಯ:–** 371(ಜೆ) ಅಡಿಯಲ್ಲಿ ಬೋಧಕೇತರ ಸಿಬ್ಬಂದಿ ನೇಮಕಾತಿ ಮಾಡುವ ಕುರಿತು.
**ಉಲ್ಲೇಖ:–** ಸರಕಾರದ ಪತ್ರ ಸಂಖ್ಯೆ: ಇಡಿ 572 ಯುಎನ್ಇ 2014 ದಿನಾಂಕ:27–9–2017.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ನೇಮಕಾತಿಗಾಗಿ ಉಲ್ಲೇಖಿತ ಪತ್ರದಲ್ಲಿ ಸ್ಪಷ್ಟವಾಗಿ ನಿರ್ದೇಶನ ನೀಡಲಾಗಿದೆ. ಬೋಧಕ ಸಿಬ್ಬಂದಿಗಳ ನೇಮಕಾತಿಗಾಗಿ 371(ಜೆ) ಅಡಿಯಲ್ಲಿ ಒಂದು ಪ್ರಾಧ್ಯಾಪಕ ಹಾಗೂ ಎರಡು ಟ್ಯುಟರ್ ಹುದ್ದೆಗಳು ಭರ್ತಿ ಮಾಡಿಕೊಳ್ಳಲು ಈಗಾಗಲೇ ಅಧಿಸೂಚನೆ ಹೊರಡಿಸಲಾಗಿದೆ. ಆದರೆ 371(ಜೆ) ಅಡಿಯಲ್ಲಿ ಒಟ್ಟು 14 ಬೋಧಕೇತರ ಹುದ್ದೆಗಳನ್ನು ಮೀಸಲಾಗಿದ್ದು ಇದನ್ನು ಕಡ್ಡಾಯವಾಗಿ ಭರ್ತಿ ಮಾಡಿಕೊಳ್ಳಬೇಕಾಗಿದೆ. ಮುಂದುವರೆದು ಬೋಧಕೇತರ ಹುದ್ದೆಯ ನೇಮಕಾತಿಗಾಗಿ ಇಲ್ಲಿವರೆಗೂ ಸಿ & ಆರ್ (C&R)ನ್ನು ರಚಿಸಿರುವುದಿಲ್ಲ. ವಿಶ್ವವಿದ್ಯಾನಿಲಯದ ಬೋಧಕೇತರ ಸಿಬ್ಬಂದಿಗಳ ಸಿ & ಆರ್(C&R) ರಚಿಸುವ ಪ್ರಕ್ರಿಯ ಜಾರಿಯಲ್ಲಿದ್ದು ಅದಕ್ಕೆ ಇನ್ನೂ ಕಾಲಾವಕಾಶ ಬೇಕಾಗಿರುವದರಿಂದ ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ ಅಥವಾ ಗುಲಬರ್ಗಾ ವಿಶ್ವವಿದ್ಯಾನಿಲಯ ಕಲಬುರ್ಗಿಗಳಲ್ಲಿ ಲಭ್ಯವಿರುವ ಸಿ & ಆರ್(C&R)ನ್ನು ಬಳಸಿಕೊಂಡು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಕ್ರಮಕೈಗೊಳ್ಳಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:– ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ 371(ಜೆ) ಅಡಿಯಲ್ಲಿ ಬೋಧಕೇತರ ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳಲು ಅನುಮೋದಿಸಲಾಯಿತು.***

## *ಸಿಂಡಿಕೇಟ್ ಐಟಂ ಸಂಖ್ಯೆ : 16*

**ಸಿಂಡಿಕೇಟ್ ಸದಸ್ಯರಾದ ಮಾನ್ಯ ಆರ್.ಬಿ.ಭಾವಿಕಟ್ಟಿ ಇವರು ಈ ಕೆಳಕಂಡ ಪ್ರಸ್ತಾವನೆಗಳನ್ನು ಸಲ್ಲಿಸಿರುತ್ತಾರೆ.**

1. ನಾನು ಈ ಹಿಂದೆ ಹಲವಾರು ವಿಷಯದ ಬಗ್ಗೆ ಮಾನ್ಯ ಕುಲಸಚಿವರ ಹತ್ತಿರ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ಅನೇಕ ವಿಷಯಗಳ ಮಾಹಿತಿ ಕೇಳಿದ್ದೆ ಇಲ್ಲಿಯವರೆಗೆ ಯಾವದೇ ಮಾಹಿತಿ ತಮ್ಮಿಂದ ಬಂದಿರುವುದಿಲ್ಲ. ನಾನು ಕೇಳಿದ ಮಾಹಿತಿ ಯಾಕೆ ಬಂದಿರುವದಿಲ್ಲ? ಆ ಮಾಹಿತಿ ನಿಮ್ಮ ವಿಶ್ವವಿದ್ಯಾಲಯದಲ್ಲಿ ಇರುತ್ತವೆಯೋ ಅಥವಾ ಇಲ್ಲೊ? ಎಂಬುದರ ಬಗ್ಗೆ ಸ್ಪಷ್ಟವಾದ ಉತ್ತರ ಬೇಕಾಗಿರುವದರಿಂದ ಈ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ತಂದಿರುತ್ತೇನೆ.

   ***ನಿರ್ಣಯ:– ಅವಗಾಹನಿಸಲಾಯಿತು.***

2. ಮಾನ್ಯ ಉನ್ನತ ಶಿಕ್ಷಣ ಸಚಿವರ ಆದೇಶ ಹಾಗೂ ಉನ್ನತ ಶಿಕ್ಷಣ ಇಲಾಖೆಯ ಸುತ್ತೋಲೆಯ ಹಾಗೂ ಯುಜಿಸಿ ನಿಯಮದ ಪ್ರಕಾರ ವಿಶ್ವವಿದ್ಯಾಲಯದ ಉಪನ್ಯಾಸಕರು ತರಗತಿಗಳನ್ನು(ಕ್ಲಾಸ) ತೆಗೆದುಕೊಳ್ಳುವದರ ಬಗ್ಗೆ ಮಾಹಿತಿಗೋಸ್ಕರ ನಾನು ಅವರು ತರಗತಿಗಳನ್ನು ಕಳೆದ ಒಂದು ವರ್ಷದಿಂದ ಇಲ್ಲಿಯವರೆಗೆ ಯುಜಿಸಿ ನಿಯಮದ ಕೆಳಗೆ ತರಗತಿಗಳನ್ನು ತೆಗೆದುಕೊಂಡಿದ್ದಾರೋ ಇಲ್ಲವು ಎಂಬುದರ ಬಗ್ಗೆ ಸಿಸಿ ಟಿವಿ ಫೋಟೇಜ್ ಅನ್ನು ಮಾಹಿತಿ ಕೇಳಿದ್ದೆ ಅದನ್ನು ನೀವು ಇಲ್ಲಿಯವರೆಗೆ ಕೊಟ್ಟಿಲ್ಲ. ವಿಶ್ವವಿದ್ಯಾಲಯದ ಎಲ್ಲ ಕ್ಲಾಸ ರೂಮಿನಲ್ಲಿ ಸಿಸಿ ಟಿವಿ ಇರುತ್ತದೆ ಆದರೂ ನೀವು ಮಾಹಿತಿ ಕೊಟ್ಟಿಲ್ಲ ಕಾರಣ ಇದರ ಉತ್ತರಕ್ಕಾಗಿ ಹಾಗೂ ಇದರ ಬಗ್ಗೆ ಚರ್ಚೆ ಮಾಡುವುದಕ್ಕಾಗಿ ಈ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಮಂಡಿಸಿದೆ.

   ***ನಿರ್ಣಯ:– ಈ ವಿಷಯ ಕುರಿತು ಡೀನರ ಅಭಿಪ್ರಾಯ ಬಂದ ಮೇಲೆ ಉತ್ತರಿಸಲಾಗುವುದು.***

## *ಸಿಂಡಿಕೇಟ್ ಪುರವಣಿ ಸಂಖ್ಯೆ : 01*

**ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ. ಆರ್.ಸಿ.ಪಾಟೀಲ ಅವರು ಈ ಕೆಳಕಂಡ ಪ್ರಸ್ತಾವನೆಗಳನ್ನು ಸಲ್ಲಿಸಿರುತ್ತಾರೆ**

1. **ವಿಷಯ: ಎನ್.ಎಸ್.ಎಸ್. ಭವನದ ನಿರ್ಮಾಣಕ್ಕೆ ಹಣ ಸಂಗ್ರಹಿಸುವ ಕುರಿತು.**

ವಿಶ್ವವಿದ್ಯಾಲಯದಲ್ಲಿ ಎನ್.ಎಸ್.ಎಸ್. ಭವನದ ನಿರ್ಮಾಣಕ್ಕಾಗಿ ವಿಶ್ವವಿದ್ಯಾಲಯದ ವ್ಯಾಪ್ತಿಗೆ ವಳಪಡುವ ಎಲ್ಲಾ ಮಹಾವಿದ್ಯಾಲಯಗಳ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರಿಂದ ರೂ.50/- ಗಳನ್ನು ಸಂಗ್ರಹಿಸುವ ಕುರಿತು ಈಗಾಗಲೆ ಸಿಂಡಿಕೇಟ್ ಐಟಂ ಸಂಖ್ಯೆ-25 ರ ನಿರ್ಣಯ ತೆಗೆದುಕೊಂಡು ಪ್ರಸ್ತುತ ಶೈಕ್ಷಣಿಕ ಸಾಲಿನಿಂದ ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿನಿಯರಿಗೆ ಮಾತ್ರ ಸಂಗ್ರಹಿಸಲಾಗುತ್ತಿದೆ, ಆದರೆ ಪ್ರಸ್ತುತ ಶೈಕ್ಷಣಿಕ ಸಾಲಿನ ದ್ವಿತೀಯ ಮತ್ತು ತೃತೀಯ ವರ್ಷದ ವಿದ್ಯಾರ್ಥಿನಿಯರಿಗೆ ಸಂಗ್ರಹಿಸಲಾಗುತ್ತಿಲ್ಲ ಈ ವಿದ್ಯಾರ್ಥಿನಿಯರಿಗೂ ಸಹ ಇದೆ ಶೈಕ್ಷಣಿಕ ಸಾಲಿನಿಂದ 50 ರೂಪಾಯಿಗಳನ್ನು ಸಂಗ್ರಹಿಸುವ ವ್ಯವಸ್ಥೆ ಮಾಡುವ ಕುರಿತು ಹಾಗೂ ಮುಂದಿನ ಶೈಕ್ಷಣಿಕ ವರ್ಷದಿಂದ ವಿಶ್ವವಿದ್ಯಾಲಯದ ಪ್ರಥಮ, ದ್ವಿತೀಯ, ಮತ್ತು ತೃತೀಯ ವರ್ಷದ ಹಾಗೂ ಸ್ನಾತಕೋತ್ತರ ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿನಿಯರಿಗೆ ಸಂಗ್ರಹಿಸಲು ಕ್ರಮ ತೆಗೆದುಕೊಳ್ಳುವ ಕುರಿತು ಈ ವಿಷಯವನ್ನು ಸಿಂಡಿಕೇಟ್ ಅನುಮೋದನೆಗಾಗಿ ಸಲ್ಲಿಸಲಾಗಿದೆ.

***ನಿರ್ಣಯ:-*** **ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್. ಭವನದ ನಿರ್ಮಾಣಕ್ಕಾಗಿ ಸಂಲಗ್ನತೆ ಮಹಾವಿದ್ಯಾಲಯಗಳ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರಿಂದ ಪ್ರತಿ ವರ್ಷ ರೂ.50/- ಗಳನ್ನು ಸಂಗ್ರಹಿಸಲು ತೀರ್ಮಾನಿಸಲಾಯಿತು.**

2. **ವಿಷಯ: ಮಾನ್ಯತೆ ಇರುವ ಹೊರ ರಾಜ್ಯದ/ ಬೇರೆ ವಿಶ್ವವಿದ್ಯಾಲಯ/ವಿವಿಧ ಬೋರ್ಡ/ಇನ್‌ಸ್ಟಿಟ್ಯೂಟ್ ವಿದ್ಯಾರ್ಥಿನಿಯರಿಗೆ ಪ್ರವೇಶಾತಿ ನೀಡುವ ಕುರಿತು.**

National Institute of Research and Development Council ಈ ಇನ್‌ಸ್ಟಿಟ್ಯೂಟ್‌ನ ವಿದ್ಯಾಥಿನಿಯರಿಗೆ ಕಳೆದ ಸಾಲಿನಲ್ಲಿ ಪ್ರವೇಶವನ್ನು ನೀಡಲಾಗಿತ್ತು ಆದರೆ ಪ್ರಸ್ತುತ ಸಾಲಿನಲ್ಲಿ ಈ ವಿದ್ಯಾರ್ಥಿನಿಯರಿಗೆ ಪ್ರವೇಶಾತಿಯನ್ನು ನಿರಾಕರಿಸಲಾಗಿದೆ ಈ ವಿದ್ಯಾರ್ಥಿನಿಯರ ಶೈಕ್ಷಣಿಕ ಹಿತದೃಷ್ಟಿಯಿಂದ ಪ್ರವೇಶಾತಿ ಅನುಮತಿ ನೀಡಬೇಕಾಗಿ ಕೊರಿದೆ ಹಾಗೂ ಮುಂಬರುವ ಶೈಕ್ಷಣಿಕ ಸಾಲಿನಿಂದ ಯಾವ ಯಾವ ಬೋರ್ಡಿನಿಂದ ಬಂದ ವಿದ್ಯಾರ್ಥಿನಿಯರಿಗೆ ಪ್ರವೇಶಾತಿ ನೀಡಲಾಗುತ್ತದೆ ಎನ್ನುವುದನ್ನು ಕಾಲೇಜಿನ ಗಮನಕ್ಕೆ ತರಬೇಕು ಹಾಗೂ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಅಳವಡಿಸಬೇಕು.

***ನಿರ್ಣಯ:- ಈ ವಿಷಯ ಕುರಿತು Equivalence Committee ಪರಿಶೀಲಿಸಿ ಮುಂದಿನ ಕ್ರಮಕೈಗೊಳ್ಳಲು ತೀರ್ಮಾನಿಸಲಾಯಿತು.***

## *ಸಿಂಡಿಕೇಟ್ ಪುರವಣಿ ಸಂಖ್ಯೆ : 02*

ವಿಷಯ:- ದಿನಾಂಕ:5-9-2017ರಂದು ಜರುಗಿದ ಸಮಾನ ಅವಕಾಶ ಘಟಕದ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:-*** **ಸಮಾನ ಅವಕಾಶ ಘಟಕದ ಸಲಹಾ ಸಮಿತಿ ಸಭೆಯ ನಡವಳಿಗಳನ್ನು *ಅನುಮೋದಿಸಲಾಯಿತು.***

# *ಸಿಂಡಿಕೇಟ್ ಪುರವಣಿ ಸಂಖ್ಯೆ : 03*

ವಿಷಯ:– ಔಷಧಿಯ ರಸಾಯನಶಾಸ್ತ್ರ ಅಧ್ಯಯನ ವಿಭಾಗದ ಲ್ಯಾಬ್‌ಗೆ ಬೇಕಾದ ಪೀಠೋಪಕರಣಗಳ ಇ–ಟೆಂಡರ್ ಕುರಿತು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಔಷಧಿಯ ರಸಾಯನಶಾಸ್ತ್ರ ಅಧ್ಯಯನ ವಿಭಾಗದ ಲ್ಯಾಬಗೆ ಬೇಕಾದ ಪೀಠೋಪಕರಣಗಳ ಇ–ಟೆಂಡರಿನಲ್ಲಿ ಮೊದಲು ಎರಡು ಬಾರಿ ಟೆಂಡರ್ ಆಹ್ವಾನಿಸಿದಾಗ ಕೇವಲ ಒಂದು ಮಳಿಗೆಯವರು ಭಾಗವಹಿಸಿದಕ್ಕಾಗಿ ಮೂರನೆ ಬಾರಿಗೆ ಟೆಂಡರನ್ನು ಆಹ್ವಾನಿಸಲಾಗಿತ್ತು. ಅದರಂತೆ ಸದರಿ ಟೆಂಡರಿನಲ್ಲಿ ಮೂರು ಮಳಿಗೆಯವರು ಭಾಗವಹಿಸಿದ್ದು ಅದರಲ್ಲಿ ಮಾಡರ್ನ್ ಲ್ಯಾಬನವರು ಮಾತ್ರ ಎಲ್ಲ ರೀತಿಯ ತಾಂತ್ರಿಕ ಷರತ್ತುಗಳಲ್ಲಿ ಪೂರೈಸಿದ್ದು ಅದರಲ್ಲಿ ಮಾಡರ್ನ ಲ್ಯಾಬ್‌ನವರು ಮಾತ್ರ ಎಲ್ಲ ರೀತಿ ತಾಂತ್ರಿಕ ಷರತ್ತುಗಳಿಗೆ ಪೂರೈಸಿದ್ದು, ಉಳಿದ ಎರಡು ಮಳಿಗೆ ಅವರಾದ ಸಿಟಿಜನ್ ಮತ್ತು ಲ್ಯಾಬ್‌ಮೇಟ್ ಇವರು ತಾಂತ್ರಿಕ ಷರತ್ತುಗಳಲ್ಲಿ ಕೆಲವವನ್ನು ಮಾತ್ರ ಪೂರೈಸಿರುತ್ತಾರೆ. ಆದಕಾರಣ ಈ ವಿಷಯವನ್ನು ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ಆರ್ಥಿಕ ಬಿಡ್ಡನ್ನು ತೆರೆಯಲು ಸಿಂಡಿಕೇಟ್ ಸಭೆಯ ಅನುಮತಿಗಾಗಿ ಮಂಡಿಸಿದೆ.

***ನಿರ್ಣಯ:–* ಔಷಧಿಯ ರಸಾಯನಶಾಸ್ತ್ರ ಅಧ್ಯಯನ ವಿಭಾಗದ ಲ್ಯಾಬ್‌ಗೆ ಬೇಕಾದ ಪೀಠೋಪಕರಣಗಳನ್ನು ಕೇಂದ್ರೀಯ ಭಂಡಾರದಿಂದ ಖರೀದಿಸಲು ನಿರ್ಧರಿಸಲಾಯಿತು.**

***ಇತರೆ ವಿಷಯಗಳು***

*ಮಾನ್ಯ ಸಿಂಡಿಕೇಟ್ ಸದಸ್ಯರುಗಳಾದ ಶ್ರೀ.ಆರ್.ಬಿ.ಭಾವಿಕಟ್ಟಿ ಹಾಗೂ ಶ್ರೀ.ಆರ್.ಸಿ.ಪಾಟೀಲ ಇವರು ಪಿಡ್ಯೂಜಿ–34 ಅಡಿಯಲ್ಲಿ ಕಾರ್ಯನಿರ್ವಸಹಿಸುತ್ತಿರುವ ಸಿಬ್ಬಂದಿಗಳಿಗೆ ವೇತನವನ್ನು ರೂ.2000/–ಗಳನ್ನು ಹೆಚ್ಚಿಸಲು ತಿಳಿಸಿದರು.*

***ಅದಕ್ಕೆ ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರು ವಿಶ್ವವಿದ್ಯಾನಿಲಯದ ಆರ್ಥಿಕ ಇತಿ ಮಿತಿಯನ್ನು ಗಮನದಲ್ಲಿಟ್ಟುಕೊಂಡು ಪಿಡ್ಯೂಜಿ–34 ಅಡಿಯಲ್ಲಿ ಕಾರ್ಯನಿರ್ವಸಹಿಸುತ್ತಿರುವ ಸಿಬ್ಬಂದಿಗಳಿಗೆ ದಿನಾಂಕ:27–11–2017 ರಿಂದ ಅನ್ವಯಿಸುವಂತೆ ದಿನಾಂಕ:30–11–2017ರೊಳಗೆ ವಿಶ್ವವಿದ್ಯಾನಿಲಯಕ್ಕೆ ಬಂದು ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಸದ್ಯ ಇರುವ ವೇತನಕ್ಕೆ ರೂ.1000/– ಹೆಚ್ಚಿಸಲಾಗುವುದು ಎಂದು ತಿಳಿಸಿದರು. ಇದಕ್ಕೆ ಸಭೆಯು ಒಪ್ಪಿಕೊಂಡಿತು.***

**ಕುಲಸಚಿವರು ಪ್ರೊ.ಎಲ್.ಆರ್.ನಾಯಕ ಅವರು ಸಭೆಯನ್ನು ಅರ್ಥಪೂರ್ಣಗೊಳಿಸಿದ ಹಾಗೂ ಮೌಲ್ಯಾಧಾರಿತ, ಸೂಕ್ತ ಸಲಹೆಗಳನ್ನು ಮುಂದಿಟ್ಟ ಎಲ್ಲ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸಿದರು.**

**ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿಗಳು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

**ಕುಲಪತಿಗಳು ಹಾಗೂ ಸಭಾಧ್ಯಕ್ಷರು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ